# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 738

ಸದಸ್ಯರ ಹೆಸರು : ಶ್ರೀ ಡಿ.ಎಸ್.ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸುವ ದಿನಾಂಕ : 12.12.2025.

ಉತ್ತರಿಸುವವರು : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು.

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಗ್ರಾಮ ಪಂಚಾಯಿತಿಗಳ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಒಟ್ಟು ಗ್ರಂಥಪಾಲಕರ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ಒದಗಿಸುವುದು) | ರಾಜ್ಯದ ಗ್ರಾಮ ಪಂಚಾಯಿತಿಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಗ್ರಾಮ ಪಂಚಾಯಿತಿ ಗ್ರಂಥಾಲಯ ಹಾಗೂ ಮಾಹಿತಿ ಕೇಂದ್ರದ ಮೇಲ್ವಿಚಾರಕರ ಒಟ್ಟು ಸಂಖ್ಯೆ:5436.<br>ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಿದೆ. |
| (ಆ) | ಗ್ರಾಮ ಪಂಚಾಯಿತಿ/ ಗ್ರಾಮ ಗ್ರಂಥಾಲಯಗಳಲ್ಲಿ ಕೆಲಸ ಮಾಡುತ್ತಿರುವ ಗ್ರಂಥಪಾಲಕರಿಗೆ ರಾಜ್ಯ ಸರ್ಕಾರ ಹೊರಡಿಸಿರುವ ಕನಿಷ್ಠ ವೇತನ ಅಧಿಸೂಚನೆ ಪ್ರಕಾರ ನೀಡಲಾಗುತ್ತಿಲ್ಲ ಎಂಬ ದೂರುಗಳು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ. |
| (ಇ) | ಕನಿಷ್ಠ ವೇತನವನ್ನು ಪಡೆಯದೆ ಆರ್ಥಿಕ ಸಂಕಷ್ಟಕ್ಕೆ ಒಳಗಾದ ಹಿನ್ನೆಲೆಯಲ್ಲಿ ಇದುವರೆಗೆ ಎಷ್ಟು ಮಂದಿ ಗ್ರಂಥಪಾಲಕರು ಮೃತಪಟ್ಟಿದ್ದಾರೆ ಎಂಬ ಮಾಹಿತಿ ಸರ್ಕಾರದ ಗಮನಕ್ಕೆ ಬಂದಿದೆಯೇ; (ಮಾಹಿತಿ ಒದಗಿಸುವುದು) | 1. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ತಾಲ್ಲೂಕು ಕಳಲುಘಟ್ಟ ಗ್ರಾಮ ಪಂಚಾಯಿತಿಯ ಗ್ರಂಥಾಲಯ ಮೇಲ್ವಿಚಾರಕರಾದ ಶ್ರೀ ರಾಮಚಂದ್ರಯ್ಯ ಇವರು ಸರಿಯಾಗಿ ಕೆಲಸ ನಿರ್ವಹಿಸದ ಕಾರಣ ದಿನಾಂಕ::09.07.2025ರ ಸಾಮಾನ್ಯ ಸಭೆಯಲ್ಲಿ ಸದರಿಯವರನ್ನು ವಜಾಗೊಳಿಸಿ ನಿರ್ಣಯಿಸಲಾಗಿರುತ್ತದೆ. ಸದರಿಯವರು ದಿನಾಂಕ:28.10.2025 ರಂದು ಮೃತ ಪಟ್ಟಿರುತ್ತಾರೆ.<br>2. ಕಲಬುರಗಿ ಜಿಲ್ಲೆಯ ಸೇಡಂ ತಾಲ್ಲೂಕಿನ ಮಳಖೇಡ ಗ್ರಾಮ ಪಂಚಾಯಿತಿಯ ಗ್ರಂಥಾಲಯ ಮೇಲ್ವಿಚಾರಕರಾದ ಶ್ರೀಮತಿ ಭಾಗ್ಯವತಿ ಕೋಂ |

| | | |
|---|---|---|
| | | ವಿಶ್ವೇಶ್ವರಯ್ಯ ಅಗ್ನಿಮಠ ರವರು ದಿನಾಂಕ:13.10.2025 ರಂದು ಮೃತಪಟ್ಟಿರುತ್ತಾರೆ.<br>ಸದರಿಯವರಿಗೆ 02 ತಿಂಗಳ ವೇತನ ಪಾವತಿಯು ಗ್ರಾಮ ಪಂಚಾಯತಿ ಹಂತದಲ್ಲಿ ವಿಳಂಬವಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br>ಸಂಬಂಧಿಸಿದ ಪಂಚಾಯತಿ ಅಭಿವೃದ್ಧಿ ಅಧಿಕಾರಿಯನ್ನು ಇಲಾಖಾ ವಿಚಾರಣೆ ಕಾಯ್ದಿರಿಸಿ ದಿನಾಂಕ:17-10-2025ರಂದು ಅಮಾನತುಗೊಳಿಸಲಾಗಿರುತ್ತದೆ. |
| (ಈ) | ಸಂಬಂಧಿತ ಗ್ರಾಮ ಪಂಚಾಯಿತಿಗಳಲ್ಲಿ ವೇತನ ಪಾವತಿ ಕಡಿಮೆಯಾಗಲು ಕಾರಣವಾದ ಆಡಳಿತಾತ್ಮಕ/ಹಣ ಬಿಡುಗಡೆ/ ವರ್ಗೀಕರಣದ ದೋಷಗಳೇನು; (ಸಂಪೂರ್ಣ ವಿವರ ಒದಗಿಸುವುದು) | 1. ಸರ್ಕಾರದ ಆದೇಶ ಸಂಖ್ಯೆ:RDPR/425/GPA/2023 ಬೆಂಗಳೂರು, ದಿನಾಂಕ:13.02.2024ರಲ್ಲಿ ಗ್ರಾಮ ಪಂಚಾಯಿತಿ ಗ್ರಂಥಾಲಯ ಹಾಗೂ ಮಾಹಿತಿ ಕೇಂದ್ರ ಮೇಲ್ವಿಚಾರಕರಿಗೆ ದಿನಾಂಕ:04.09.2023 ರಿಂದ ಜಾರಿಗೆ ಬರುವಂತೆ ಮಾಸಿಕ ಕನಿಷ್ಠ ವೇತನ ರೂ.16,382.52/-ಗಳು ಮತ್ತು ವಾರ್ಷಿಕವಾಗಿ ವ್ಯತ್ಯಾಸವಾಗುವ ತುಟ್ಟಿಭತ್ಯೆಯನ್ನು (VDA) ಪಾವತಿಸಲು ಆದೇಶಿಸಲಾಗಿರುತ್ತದೆ. ಅದರನ್ವಯ ಸರ್ಕಾರದಿಂದ ರೂ.12000/- ಗಳನ್ನು ಪಾವತಿಸಲಾಗುತ್ತಿದೆ.<br>2. ಪಂಚಾಯತ್ ರಾಜ್ ಆಯುಕ್ತಾಲಯದ ಪತ್ರ ಸಂಖ್ಯೆ: ಕಪಂರಾಆ/ಅಭಿವೃದ್ಧಿ/ ಗ್ರಂಥಾಲಯ/ 262/2022, ದಿನಾಂಕ:30.12.2023 ರನ್ವಯ ಕನಿಷ್ಠ ವೇತನದ ವ್ಯತ್ಯಾಸದ ಮೊತ್ತವನ್ನು ಗ್ರಾಮ ಪಂಚಾಯತಿಗಳಲ್ಲಿ ಸಂಗ್ರಹವಾಗುವ ಶೇಕಡಾ 6 ರ ಗ್ರಂಥಾಲಯ ಉಪಕರವನ್ನು ಜಿಲ್ಲಾ ಪಂಚಾಯತಿಗಳಲ್ಲಿ ತೆರೆಯಲಾಗಿರುವ ಬ್ಯಾಂಕ್ ಖಾತೆಗೆ ಜಮಾ ಮಾಡಿ, ಸದರಿ ಮೊತ್ತದಿಂದ ಪಾವತಿಸಲು ನಿರ್ದೇಶನ ನೀಡಲಾಗಿರುತ್ತದೆ. ಅದರಂತೆ ಕನಿಷ್ಟ ವೇತನ ವ್ಯತ್ಯಾಸದ ಮೊತ್ತವನ್ನು ಜಿಲ್ಲಾ ಪಂಚಾಯತಿಗಳಿಂದ ಗ್ರಾಮ ಪಂಚಾಯಿತಿಗಳಿಗೆ ಬಿಡುಗಡೆ ಮಾಡಲಾಗುತ್ತಿದೆ.<br>3. 2025-26ನೇ ಸಾಲಿನಲ್ಲಿ ಮಾರ್ಚ್-2025 ರಿಂದ ನವೆಂಬರ್ 2025 ರವರೆಗೆ 03 ತ್ರೈಮಾಸಿಕ ಕಂತುಗಳಲ್ಲಿ ಒಟ್ಟು ರೂ.60,49,75,549/-ಗಳ ಗೌರವ ಧನವನ್ನು ನೇರವಾಗಿ ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಗೆ ಬಿಡುಗಡೆ ಮಾಡಲಾಗಿರುತ್ತದೆ. |
| (ಉ) | ಸರ್ಕಾರವು ಈ ವ್ಯತ್ಯಾಸ ಸರಿಪಡಿಸಲು ಯಾವ ಕ್ರಮಗಳನ್ನು ಕೈಗೊಂಡಿದೆ | ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ನಿಯಮಿತವಾಗಿ ಸಭೆಗಳಲ್ಲಿ ಗ್ರಾಮ ಪಂಚಾಯಿತಿ ಗ್ರಂಥಾಲಯ ಹಾಗೂ |

| | | |
|---|---|---|
| | ಹಾಗೂ ಬಾಕಿ ವೇತನ arrears ಅನ್ನು ಯಾವ ದಿನಾಂಕದೊಳಗೆ ಪಾವತಿಸಲಾಗುವುದು? | ಮಾಹಿತಿ ಕೇಂದ್ರದ ಮೇಲ್ವಿಚಾರಕರಿಗೆ ನಿಗದಿತ ಸಮಯಕ್ಕೆ ವೇತನವನ್ನು ಪಾವತಿಸಲು ದಿನಾಂಕ:05-11-2025 ರಂದು ನಿರ್ದೇಶನ ನೀಡಲಾಗಿದೆ. ಅದರಂತೆ ವೇತನ ಪಾವತಿಸಲು ಕ್ರಮವಹಿಸಲಾಗುತ್ತಿದೆ. ಕೆಲವು ಜಿಲ್ಲೆಗಳಲ್ಲಿ ಗ್ರಾಮ ಪಂಚಾಯತಿ ತೆರಿಗೆ ಬೇಡಿಕೆ ಕಡಿಮೆ ಇರುವುದರಿಂದ ಗ್ರಂಥಾಲಯ ಮೇಲ್ವಿಚಾರಕರಿಗೆ ವೇತನ ವ್ಯತ್ಯಾಸದ ಮೊತ್ತವನ್ನು ಪಾವತಿಸಲು ಕೊರತೆ ಇರುವುದರಿಂದ ಅಂತಹ ಜಿಲ್ಲೆಗಳಲ್ಲಿ ಬಾಕಿ ವೇತನವನ್ನು ಪಾವತಿಸುವ ಪ್ರಸ್ತಾವನೆ ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿರುತ್ತದೆ. |

**ಸಂಖ್ಯೆ:** ಗ್ರಾಅಪ 938 ಗ್ರಾಪಂಅ 2025

**(ಪ್ರಿಯಾಂಕ್ ಖರ್ಗೆ)**

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ
ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು.

| ವಿಧಾನ ಪರಿಷತ್ತಿನ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:738ಕ್ಕೆ ಅನುಬಂಧ | | | | |
|---|---|---|---|---|
| ರಾಜ್ಯದ ಗ್ರಾಮ ಪಂಚಾಯಿತಿ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರಗಳ ವಿವರ | | | | |
| ಕ್ರ . ಸಂ. | ಜಿಲ್ಲೆ ಯ ಹೆಸರು | ಗ್ರಾಮ ಪಂಚಾಯಿತಿಗಳ ಸಂಖ್ಯೆ | ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರಗಳ ಒಟ್ಟು ಸಂಖ್ಯೆ | ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವವರ ಒಟ್ಟು ಸಂಖ್ಯೆ |
| 1 | ಬಾಗಲಕೋಟೆ | 195 | 180 | 172 |
| 2 | ಬಳ್ಳಾರಿ | 100 | 100 | 84 |
| 3 | ಬೆಂಗಳೂರು ನಗರ | 85 | 86 | 77 |
| 4 | ಬೆಂಗಳೂರು( ಗ್ರಾ) | 101 | 97 | 89 |
| 5 | ಬೆಂಗಳೂರು ದಕ್ಷಿಣ | 126 | 130 | 122 |
| 6 | ಬೆಳಗಾವಿ | 500 | 486 | 425 |
| 7 | ಬೀದರ್ | 182 | 183 | 172 |
| 8 | ಚಾಮರಾಜನಗರ | 130 | 128 | 121 |
| 9 | ಚಿಕ್ಕಬಳ್ಳಾಪುರ | 157 | 153 | 141 |
| 10 | ಚಿಕ್ಕಮಗಳೂರು | 226 | 226 | 209 |
| 11 | ಚಿತ್ರದುರ್ಗ | 189 | 202 | 184 |
| 12 | ದಕ್ಷಿಣ ಕನ್ನಡ | 223 | 212 | 207 |
| 13 | ದಾವಣಗೆರೆ | 194 | 206 | 196 |
| 14 | ಧಾರವಾಡ | 146 | 140 | 105 |
| 15 | ಗದಗ | 122 | 124 | 118 |
| 16 | ಹಾಸನ | 264 | 257 | 253 |
| 17 | ಹಾವೇರಿ | 223 | 217 | 202 |
| 18 | ಕಲ್ಬುರ್ಗಿ | 261 | 262 | 235 |
| 19 | ಕೊಡಗು | 102 | 98 | 87 |
| 20 | ಕೋಲಾರ | 154 | 157 | 149 |
| 21 | ಕೊಪ್ಪಳ | 153 | 150 | 138 |
| 22 | ಮಂಡ್ಯ | 233 | 234 | 202 |
| 23 | ಮೈಸೂರು | 256 | 236 | 208 |
| 24 | ರಾಯಚೂರು | 179 | 179 | 169 |
| 25 | ಶಿವಮೊಗ್ಗ | 262 | 258 | 247 |
| 26 | ತುಮಕೂರು | 330 | 336 | 324 |
| 27 | ಉಡುಪಿ | 155 | 150 | 148 |
| 28 | ಉತ್ತರ ಕನ್ನಡ | 229 | 228 | 213 |
| 29 | ವಿಜಯಪುರ | 211 | 202 | 193 |
| 30 | ವಿಜಯನಗರ | 137 | 143 | 128 |
| 31 | ಯಾದಗಿರಿ | 122 | 124 | 118 |
| | **ಒಟ್ಟು** | **5947** | **5884** | **5436** |